<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಾಗೇಪಲ್ಲಿ.</u>

<u>ಸಿ.ಸಿ. ಸಂಖ್ಯೆ:59/2015</u>

| | |
|---|---|
| ಫ್ರಾಸಾ | 18 |
| ಚಾಸಾ | 18/19 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 08.01.2026.**

| | | |
|---|---|---|
| ಸಾಕ್ಷಿಯ ಹೆಸರು | : | ರಾಧಮ್ಮ |
| ಗಂಡನ ಹೆಸರು | : | ಮಂಜುನಾಥ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಸಂಜೀವರಾಯನ ಹಳ್ಳಿ |

**(ಆರೋಪಿಯು ಗೈರುಹಾಜರಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತು ಪತ್ತೆಗೆ ತಕರಾರು ಇಲ್ಲವೆಂದು ನುಡಿದಿದ್ದು, ಆದುದರಿಂದ ಸಾಕ್ಷ್ಯ ವಿಚಾರಣೆಗೆ ಅನುಮತಿ ನೀಡಲಾಯಿತು.)**

**<u>ಮುಖ್ಯ ವಿಚಾರಣೆ : ಸ.ಸ.ಅ. ರವರಿಂದಃ</u>**

ನಾನು ಪೊಲೀಸರಿಗೆ ಬಾಗೇಪಲ್ಲಿ ಆಸ್ಪತ್ರೆಯಲ್ಲಿ ಕಳೆದ ಮೂರು ವರ್ಷದ ಹಿಂದೆ ನನ್ನ ತಮ್ಮನಾದ ನಟರಾಜ್ ರವರಿಗೆ ಅಪಘಾತವಾಗಿರುವ ಸಂಬಂಧ ಹೇಳಿಕೆ ನೀಡಿದ್ದೇನೆ.

ಚಿತ್ರಾವತಿ ಡ್ಯಾಂ ಬಳಿ 2014ರ ಮೇ ತಿಂಗಳಿನಲ್ಲಿ ರಾತ್ರಿ 8 ಗಂಟೆ ಸಮಯದಲ್ಲಿ ಅಪಘಾತವಾಗಿದ್ದು, ಆ ಸಮಯದಲ್ಲಿ ನಾನು ಮನೆಯಲ್ಲಿದ್ದೆ. ನಂತರ ನನ್ನನ್ನು ನನ್ನ ತಮ್ಮನಾದ ಚಾಸಾ-21ರವರು ನನ್ನನ್ನು ಚಿತ್ರಾವತಿ ಡ್ಯಾಂ ಬಳಿ ರಾತ್ರಿ 8 ಗಂಟೆಗೆ ಕರೆದುಕೊಂಡು ಹೋದರು. ನನ್ನ ತಮ್ಮನಿಗೆ ಅಪಘಾತದಿಂದ ರಕ್ತ ಸ್ರಾವ ಆಗಿತ್ತು.

ಗಾಯಾಳು ನಟರಾಜ್ ರವರನ್ನು ಆಟೋ ಮೂಲಕ ನಮ್ಮವರು 10 ಜನರು ಬಾಗೇಪಲ್ಲಿ ಆಸ್ಪತ್ರೆಗೆ ಕರೆದುಕೊಂಡು ಬಂದರು. ನಾವೂ ಸಹ ಆಸ್ಪತ್ರೆಗೆ ಬಂದಿದ್ದು, ನಟರಾಜ್ ರವರಿಗೆ ಚಿಕಿತ್ಸೆ ನೀಡಲು ಆಗುವುದಿಲ್ಲ ಎಂದು ಬಾಗೇಪಲ್ಲಿ ಆಸ್ಪತ್ರೆಯಲ್ಲಿ ತಿಳಿಸಿದರು. ಆ ನಂತರ ನಟರಾಜ್ ರವರನ್ನು ಆಂಬುಲೆನ್ಸ್ ಮೂಲಕ ನಾನು, ಚಾಸಾ-15, 16 ಮತ್ತು 21ರವರು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದು ನುಡಿಯುತ್ತಾರೆ.

ಸುಮಾರು 8 ತಿಂಗಳುಗಳ ಕಾಲ ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಐ.ಸಿ.ಯು ನಲ್ಲಿ ಇದ್ದರು ಎಂದು ನುಡಿಯುತ್ತಾರೆ. ಆತನ ತಲೆಗೆ ಶಸ್ತ್ರ ಚಿಕಿತ್ಸೆ ಮಾಡಿದ್ದು, ಆ ನಂತರ ನಟರಾಜ್ ನನ್ನು ಮನೆಗೆ ಕರೆದುಕೊಂಡು ಬಂದಿದ್ದೆವು. ಎರಡು ವರ್ಷದ ನಂತರ ಮನೆಗೆ ವೈದ್ಯರನ್ನು ಕರೆಯಿಸಿ ಚಿಕಿತ್ಸೆ ಕೊಡಿಸುತ್ತಿದ್ದೆವು ಎಂದು ನುಡಿಯುತ್ತಾರೆ. ಮನೆಗೆ ಎರಡು ಮೂರು ಬಾರಿ ವೈದ್ಯರು ಬಂದು ಚಿಕಿತ್ಸೆ ನೀಡಿದ್ದರು ಎಂದು ನುಡಿಯುತ್ತಾರೆ. ಆ ನಂತರ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಪುನಃ ಕರೆದುಕೊಂಡು ಹೋದೆವು. ಆ ನಂತರ ನಟರಾಜ್ ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಮೃತರಾದರು ಎಂದು ನುಡಿಯುತ್ತಾರೆ. ಆಂಬುಲೆನ್ಸ್ ಮೂಲಕ ನಟರಾಜ್ ಮೃತ ದೇಹವನ್ನು ಬಾಗೇಪಲ್ಲಿ ಆಸ್ಪತ್ರೆಗೆ ಕರೆದುಕೊಂಡು ಬಂದೆವು. ನಾವೇ ಕೇಳಿ ಮೃತ ದೇಹವನ್ನು ಬಾಗೇಪಲ್ಲಿ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಬಂದೆವು ಎಂದು ನುಡಿಯುತ್ತಾರೆ.

**ಪಾಟೀ ಸವಾಲು : ಶ್ರೀ ಕೆ.ಎಸ್. ಆರ್.ವಕೀಲರಿಂದ, ಆರೋಪಿ ಪರವಾಗಿಃ**

ನಾನು ಮೃತ ನಟರಾಜ್ ರವರ ಸ್ವಂತ ಅಕ್ಕ. ನಾನು ಗುಂಡ್ಲಹಳ್ಳಿಗೆ ಮದುವೆ ಆಗಿದ್ದೇನೆ. ಅಪಘಾತವಾದಾಗ ನಾನು ಸಂಜೀವರಾಯನ ಹಳ್ಳಿಯಲ್ಲಿ ಇದ್ದೆ. ನನ್ನ ತಮ್ಮ ಚಾಸಾ-21ರವರು ಅಪಘಾತವಾಗಿದೆ ಎಂದು ರಾತ್ರಿ 8 ಗಂಟೆಯಲ್ಲಿ ತಿಳಿಸಿದರು. ನಾವು ಅಪಘಾತ ಸ್ಥಳಕ್ಕೆ ರಾತ್ರಿ 8.30ಕ್ಕೆ ಹೋಗಿದ್ದೆವು. ಗಾಯಾಳು ನಟರಾಜ್ ನನ್ನು ಆಟೋ ಮೂಲಕ ನಾನು,ಚಾಸಾ-15 ರಿಂದ 17 ಮತ್ತು ಚಾಸಾ-21ರವರು ಕರೆದುಕೊಂಡು

ಬಂದೆವು. ಆಟೋದಲ್ಲಿ ನಾನು, ಚಾಸಾ–21, 16 ಮತ್ತು 17 ರವರು ಬಂದಿದ್ದೆವು ಎಂದು ನುಡಿಯತ್ತಾರೆ. ಆಟೋವನ್ನು ನಾವೇ ಕರೆಯಿಸಿದ್ದೆವು. ನನ್ನ ತಮ್ಮ ಡ್ಯಾಂ ಬಳಿ ಇದ್ದ ಆಟೋವನ್ನು ಕರೆದುಕೊಂಡು ಬಂದರು ಎಂದು ನುಡಿಯುತ್ತಾರೆ. ಆಟೋ ಚಾಲಕ ಯಾರೆಂದು ಗೊತ್ತಿಲ್ಲ. ಆಟೋ ಹಿಂಭಾಗ ಮೂರು ಜನ ಕುಳಿತ್ತಿದ್ದೆವು. ಹಿಂಭಾಗ ನಾನು, ನನ್ನ ತಮ್ಮ ನಟರಾಜ್ ಮತ್ತು ಆಶೋಕ ಕುಳಿತ್ತಿದ್ದೆವು. ಆಟೋ ಮುಂದೆ ಚಾಲಕ, ಚಾಸಾ–17 ಮತ್ತು ಚಾಸಾ16 ರವರು ಕುಳಿತ್ತಿದ್ದರು ಎಂದು ನುಡಿಯುತ್ತಾರೆ . ಸಾಕ್ಷಿಯು ಸ್ವತಃ ಚಾಸಾ–15 ರವರು ದ್ವಿಚಕ್ರ ವಾಹನದಲ್ಲಿ ಚಾಸಾ–4 ರವರನ್ನು ಕರೆದುಕೊಂಡು ಬಂದರು ಎಂದು ನುಡಿಯುತ್ತಾರೆ. ಚಾಸಾ–14 ರವರು ನಮ್ಮ ಜೊತೆ ಬರಲಿಲ್ಲ ಎಂದು ನುಡಿಯುತ್ತಾರೆ.

ಬಾಗೇಪಲ್ಲಿ ಆಸ್ಪತ್ರೆಯಲ್ಲಿ ನನ್ನ ತಮ್ಮ ನಟರಾಜ್ ಗೆ ಡ್ರಸಿಂಗ್ ಮಾಡಿದ್ದರು. ನನ್ನ ತಮ್ಮ ನಟರಾಜ್ ನನ್ನು ನಾವೇ ಆಂಬುಲೇನ್ಸ್ ಮೂಲಕ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನಟರಾಜ್ 8 ತಿಂಗಳುಗಳ ಕಾಲ ಐ.ಸಿ.ಯು ನಲ್ಲಿ ಇದ್ದರು ಎಂದು ನುಡಿಯುತ್ತಾರೆ. ಎಂಟು ತಿಂಗಳುಗಳ ನಂತರ ನಟರಾಜ್ ನನ್ನು ಐ.ಸಿ.ಯು. ಡಿಸ್ಚಾರ್ಜ್ ಮಾಡಿದ್ದರು ಎಂದು ನುಡಿಯುತ್ತಾರೆ. ಆ ನಂತರ 15 ದಿನಕೊಮ್ಮೆ ಕಾರಿನಲ್ಲಿ ನಟರಾಜ್ ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದೆವು ಎಂದು ನುಡಿಯುತ್ತಾರೆ. ನಟರಾಜ್ ನನ್ನು ಒಮ್ಮೊಮ್ಮೆ ಒಳರೋಗಿಯಾಗಿ ಹಾಗೂ ಹೊರರೋಗಿಯಾಗಿ ಚಿಕಿತ್ಸೆ ಕೊಡಿಸುತ್ತಿದ್ದೆವು ಎಂದು ನುಡಿಯುತ್ತಾರೆ. ನಟರಾಜ್ ನನ್ನು ಲೆಕ್ಕವಿಲ್ಲದಷ್ಟು ಬಾರಿ ಆಸ್ಪತ್ರೆಗೆ ದಾಖಲು ಮಾಡಿದ್ದೇವೆ ಎಂದು ನುಡಿಯುತ್ತಾರೆ.

ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ನಟರಾಜ್ ಮೃತರಾದರು. ನಾವು ವೈದ್ಯರಿಗೆ ಕೇಳಿ ಬಾಗೇಪಲ್ಲಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಮಾಡಿಸುವುದಾಗಿ ತಿಳಿಸಿ, ಮೃತದೇಹವನ್ನು ತೆಗೆದುಕೊಂಡು ಬಂದೆವು ಎಂದು ನುಡಿಯುತ್ತಾರೆ. ಬೆಳಗ್ಗೆ 2 ಗಂಟೆಯಲ್ಲಿ ನಟರಾಜ್ ಮೃತರಾದರು ಎಂದು ನುಡಿಯುತ್ತಾರೆ. ಬೆಳಗ್ಗೆ 10 ಗಂಟೆಗೆ ಮೃತ ದೇಹವನ್ನು ಬಾಗೇಪಲ್ಲಿ ಆಸ್ಪತ್ರೆಗೆ ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ಸೇರಿದ ಆಂಬುಲೆನ್ಸ್ ನಲ್ಲಿ

ತೆಗೆದುಕೊಂಡು ಬಂದೆವು ಎಂದು ನುಡಿಯುತ್ತಾರೆ. ನಾನೂ ಸಹ ಆಂಬುಲೆನ್ಸ್‌ನಲ್ಲಿ ಇದ್ದೆ. ನಾನು ಬಾಗೇಪಲ್ಲಿ ಆಸ್ಪತ್ರೆಯಲ್ಲಿ ಮಧ್ಯಾಹ್ನ 2.30ರ ಸಮಯದಲ್ಲಿ ಪಂಚನಾಮೆಗೆ ಸಹಿ ಮಾಡಿದ್ದೆ ಎಂದು ನುಡಿಯುತ್ತಾರೆ.

ಚಾಸಾ–15 ರಿಂದ 17 ಮತ್ತು 21ರವರು ಸಹಿ ಮಾಡಿದ್ದರು. ಬೆರಳಚ್ಚು ಮಾಡಿದ್ದ ಪಂಚನಾಮೆಗೆ ಸಹಿ ಮಾಡಿದ್ದೇವೆ. ಅದರಲ್ಲಿ ಏನು ಬರೆದಿತ್ತು ಓದಿ ಹೇಳಲಿಲ್ಲ. ನಾವು ಮೋಟಾರು ವಾಹನ ಅಪಘಾತ ಪರಿಹಾರಕ್ಕೆ ಅರ್ಜಿ ಸಲ್ಲಿಸಿದ್ದೇವೆ. ಹಾಗಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.